ಕಲ್ಪನೆ ಎಂದೇ ಭಾವಿಸಬೇಕಾಗುತ್ತದೆ. ಕಾವ್ಯದುದ್ದಕ್ಕೂ ಬಳಕೆಗೊಳ್ಳುವ ಅರ್ಥಾಂತರನ್ಯಾಸಗಳು ಕವಿಯ ಅಗಾಧವಾದ ಲೋಕಾನುಭವವನ್ನು ಕಟ್ಟಿಕೊಡುತ್ತವೆ. ಪುಂಖಾನುಪುಂಖವಾಗಿ ಪ್ರಯೋಗಗೊಂಡಿರುವ ಅವುಗಳು ಪದ್ಯದ ಕೊನೆಯಲ್ಲಿ ಬಂದು ಕಾವ್ಯಧ್ವನಿಯನ್ನು ಹೆಚ್ಚಿಸಿವೆ. ಈ ಉಕ್ತಿಗಳನ್ನು ಗಮನಿಸಿ:

ಕಾವರೆ ಕಣೆಗೊಂಡರ್
ಆತ್ಮಸತ್ವಗುಣಹಾನಿಯೇ ಸೂಚಿಸದೆ ವಿನಾಶಮಂ
ಮುನ್ನೀರ್ ಬೆನ್ನೀರೆನೆ ಬೆರಸಲಣ್ಣ ತಣ್ಣೀರೊಳವೆ
ದೋಷಮೆ ದುರ್ಬಲಮಾಗದಿರ್ಕುಮೆ
ಲಲಾಟದೊಳ್ ವಿಧಿಯು ಬರೆದ ಲಿಪಿ ಜಲಲಿಪಿಯೆ
ಗುಣಹೀನನ ಸಿರಿಯಿಂದಂ ಗುಣಿಗಳ ಬಡತನಮೆ ನಾಡೆಯುಂ ಲೇಸಲೆ

ಇಂತಹ ಹಲವಾರು ನುಡಿಗಳಲ್ಲಿ ಧ್ವನಿಯನ್ನು ನಿಗೂಢವಾಗಿ ಇಡದೆ ನೇರವಾಗಿ ನಿರೂಪಿಸಲಾಗಿದೆ. ಇವು ಪುರಾಣೋಕ್ತ ಸಾಲುಗಳಲ್ಲ; ವ್ಯಕ್ತಿ ಸ್ವಭಾವವನ್ನು ವಿಶ್ಲೇಷಿಸಿರುವ ಲೋಕೋಕ್ತಿಗಳು. ಕಾವ್ಯ ಬಂಧದ ಜೊತೆಗೆ ಅರ್ಥ ಸ್ಪಷ್ಟತೆಯನ್ನೂ ಸರಿದೂಗಿಸಿಕೊಂಡು ಬಂದ ಕವಿ ನಾಗಚಂದ್ರ.

'ರಾಮಚಂದ್ರಚರಿತ ಪುರಾಣ' ಜೈನಕಥನ; ಪುನರ್ಲೇಖನಗೊಂಡ ಕಾವ್ಯ. ಅಂದರೆ, ಕಥೆ ಹಳೆಯದಾದರೂ, ಅದು ಪ್ರತಿಪಾದಿಸುವ ತಿಳಿವಳಿಕೆ ಹೊಸದು. ಒಂದು ಕಾವ್ಯ ಪರಂಪರೆ ಮುಂದುವರೆಯಬೇಕು ಎನಿಸಿದಾಗ, ಅದರಲ್ಲಿನ ಹೊಸ ಅರ್ಥಗಳಿಗೆ ಅವಕಾಶ ದೊರೆಯಬೇಕೆಂದಾಗ ಕಥೆಯ ಗಾತ್ರ ಅಥವಾ ವಿನ್ಯಾಸವನ್ನು ಬದಲಿಸುವುದು. 'ಪಿರಿದೆನಿಸಿರ್ದ ರಾಮಕಥೆಯಂ ಕಿರಿದಾಗಿರೆ ದೇಸಿ ಮಾರ್ಗಮೆಂಬೆರಡರೊಳಂ ರಸಂ ಬಡೆದು ಪಂಡಿತಮಂಡಳಿ ಮೆಚ್ಚೆ ನೇರ್ಪುವೆತ್ತಿರಲ್' ಎಂದು ನಾಗಚಂದ್ರ ಹೇಳಿದ್ದಾನೆ. ಆತನಿಗೆ ವಿಮಲಸೂರಿಯ 'ಪಉಮಚರಿಯ' ಮತ್ತು ರವಿಷೇಣನ 'ಪದ್ಮಪುರಾಣ' ಆಕರಗಳು. ಇವೆರಡು ಅನುಕ್ರಮವಾಗಿ ಪ್ರಾಕೃತ ಹಾಗೂ ಸಂಸ್ಕೃತ ಕಾವ್ಯಗಳು. ಯಾವುದೇ ಧರ್ಮ ತನ್ನ ಸಂಸ್ಕೃತಿಯೊಂದನ್ನು ಕಟ್ಟಿಬೆಳೆಸುವಲ್ಲಿ ಸ್ವತಂತ್ರ ಕತೆಯನ್ನು ರೂಪಿಸಿಕೊಡುತ್ತದೆ. ಇಲ್ಲವೆ, ಧರ್ಮ ಸಮನ್ವಿತವಾದ ಕತೆಯೊಂದನ್ನು ಆಯ್ದುಕೊಳ್ಳುತ್ತದೆ. ಹಾಗೆಯೇ ಜೈನಧರ್ಮ ಕೂಡ ಮೂಲ ರಾಮಾಯಣದ ಕತೆಯನ್ನು ತನ್ನ ಧರ್ಮ ದೃಷ್ಟಿಗನುಗುಣವಾಗಿ ರೂಪಾಂತರಿಸಿಕೊಂಡಿದೆ. ಆದ್ದರಿಂದ, ನಾಗಚಂದ್ರ ಹೆಣೆದಿರುವ ರಾಮಾಯಣದ ಕಥೆಗೆ ಭಿನ್ನವಾದ ಅರ್ಥಪರಂಪರೆಯೊಂದು ಒದಗಿದೆ; ಬದಲಾವಣೆ ಅನಿವಾರ್ಯವಾಗಿದೆ.

ಪಂಪನಿಂದ ಆಗಮಿಕ – ಲೌಕಿಕ ಎಂಬ ಎರಡು ಕಾವ್ಯ ಪರಂಪರೆಗಳು ಆರಂಭಗೊಂಡು, ತೀರ್ಥಂಕರ ಪುರಾಣಗಳು ಮತ್ತು ಮಹಾಭಾರತದ ಕತೆ ಪ್ರಾಚೀನ ಕನ್ನಡ ಕಾವ್ಯ ರಚನೆಗೆ ಗ್ರಾಸವನ್ನು ಒದಗಿಸಿತು. ಆ ಮಾದರಿಯನ್ನು ಅನುಸರಿಸಿದ ನಾಗಚಂದ್ರ 'ಮಲ್ಲಿನಾಥ ಪುರಾಣ'ವನ್ನು ಬರೆದ. ಆದರೆ, ಲೌಕಿಕ ಕಥನವಾದ ಮಹಾಭಾರತದ ಕಡೆ ಆತ ಒಲವು ತೋರಲಿಲ್ಲ; ರಾಮಾಯಣಕ್ಕೆ ಮಾರು ಹೋದ. ಅದಕ್ಕೆ ಕಾರಣ: ವಸ್ತುವಿನಲ್ಲಿಯ ಧಾರ್ಮಿಕತೆ. ಜೊತೆಗೆ, ಆ ಕಾಲಕ್ಕಾಗಲೆ ಮತೀಯ ಕಲಹಗಳು ಆರಂಭಗೊಂಡಿದ್ದರಿಂದ, ತೀವ್ರವಾದ ಧರ್ಮನಿಷ್ಠೆಯನ್ನು ಪ್ರಚುರಪಡಿಸುವ ಅಗತ್ಯ ಒದಗಿಬಂದಂತೆ ಕಾಣುತ್ತದೆ. ಹೀಗಾಗಿ, ಕವಿಗೆ ಧರ್ಮ ಸಂರಕ್ಷಣೆ ಮತ್ತು ವ್ಯಕ್ತಿಘನತೆಗಳು ಮುಖ್ಯವೆನಿಸಿದವು. ಕಾವ್ಯ 'ರಾಗದ್ವೇಷ ನಿಬಂಧಮಪ್ಪ ಕೃತಿ' ಆಗಬಾರದು, ಹಾಗಾದರೆ ಅದು 'ಬಿತ್ತಿಬೆಳೆವಂತಕ್ಕುಂ ವಿಷೋದ್ಯಾನಮಂ' ಎಂಬುದು ಅವನ ಕಾವ್ಯತತ್ವ. ಕಾವ್ಯದಲ್ಲಿ ಧರ್ಮದ ವಿಚಾರ ಪ್ರಸ್ತಾಪಗೊಂಡ